NATIONAL TESTING SERVICE-INDIA

Multipurpose Indian Language Evaluation System

# ರಾಷ್ಟ್ರೀಯ ಪರೀಕ್ಷಣ ಸೇವೆ-ಭಾರತ

## ಬಹುಉದ್ದೇಶಿತ ಭಾರತೀಯ ಭಾಷೆಗಳ ಮೌಲ್ಯನಿರ್ಧಾರಣಾ ವ್ಯವಸ್ಥೆ

# ಬಳಕೆದಾರನ ಕೈಪಿಡಿ

# ಪ್ರಶ್ನಾಂಶಗಳ ದಾಖಲಿಸುವಿಕೆ

# (ಕನ್ನಡ ಭಾಷೆ)


## ರಾಷ್ಟ್ರೀಯ ಪರೀಕ್ಷಣ ಸೇವೆ-ಭಾರತ

(ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ ಒಂದು ಕೇಂದ್ರೀಯ ಯೋಜನೆ)

ಪ್ರಧಾನ ಕಛೇರಿ : ಭಾ.ಭಾ.ಸಂ., ಮಾನಸಗಂಗೋತ್ರಿ, ಮೈಸೂರು- 570006

# ಪೀಠಿಕೆ

## ಅಂಶ ಕಡತ ಚೀಟಿ (IFC) ಕುರಿತು

ಅಂಶ ಕಡತ ಚೀಟಿಯು ಪ್ರಶ್ನೆಯ ಅಂಶಗಳನ್ನು ಬರೆಯುವುದನ್ನು ಸೂಚಿಸುತ್ತದೆ. ಈ ಚೀಟಿಯು ನಿರ್ದಿಷ್ಟಗೊಳಿಸಿದ ಮಾಪನದಲ್ಲಿ ಮಾಡಲಾಗಿದೆ ಮತ್ತು ಇದರಲ್ಲಿ 10 ವಿಭಿನ್ನ ತಾಂತ್ರಿಕ ಮೌಲ್ಯಗಳನ್ನು ದಾಖಲಿಸಬೇಕಾಗುತ್ತದೆ. 1) ನಿರ್ವಹಣೆಯ ವಿವರಗಳು 2) ಪರೀಕ್ಷಾರ್ಥಿಗೆ ಸೂಚನೆಗಳು 3) ಪ್ರಶ್ನೆ/ಪ್ರಶ್ನಾಂಶ (ಉತ್ತರ ಸೂಚಿ/ಸಂಕೇತದೊಂದಿಗೆ) 4) ಗಳಿಕಾಂಕನ ವಿಧಾನ 5) ವಿಷಯವಸ್ತು/ದಾಖಲಿಸುವಿಕೆ (ಸಹ-ಅಂಗಗಳು) 6) ಧ್ಯೇಯೋದ್ದೇಶ (ನಿರ್ದೇಶಾತ್ಮಕ, ಶೈಕ್ಷಣಿಕ, ಸಾಮಾಜಿಕ) 7) ಪ್ರಶ್ನೆಯ ವಿಧ/ಉಪಯೋಗಿಸಲಾದ ಪ್ರರೂಪ 8) ಪ್ರಸ್ತುತಪಡಿಸುವ ಮಾಧ್ಯಮ ಮತ್ತು ಕ್ರಮ 9) ಶೈಕ್ಷಣಿಕ ಹಂತ ಮತ್ತು 10) ವಿವೇಚನೆ. ಈ ಹತ್ತು ಪರಾಮಿತಿಗಳು ಒಂದು ಪ್ರಶ್ನಾಂಶ ರಚನೆಗೆ ಬೇಕಾದ ಅಂಶಗಳಾಗಿವೆ.

## ಅನ್ವಯಿಸುವಿಕೆಗೆ ಸಂಬಂಧಿಸಿದಂತೆ

ಈ ಜಾಲದ ಅನ್ವಯಿಸುವಿಕೆಯು ಬಳಕೆದಾರನು ಪ್ರಶ್ನಾಂಶಗಳನ್ನು ಆನ್‌ಲೈನ್ ಪೋರ್ಟಲ್ ಮೂಲಕ ದಾಖಲಿಸಲು ಸಹಾಯ ಮಾಡುತ್ತದೆ. ದಾಖಲಿಸಿದ ಪ್ರಶ್ನಾಂಶಗಳು ಸ್ವಯಂಚಾಲಿತವಾಗಿ ಮೈಲ್ಸ್‌ನ ದತ್ತಾಂಶ ಭಂಡಾರದಲ್ಲಿ ಸಂಗ್ರಹವಾಗುತ್ತದೆ.


## ಅವಶ್ಯಕ ವ್ಯವಸ್ಥೆಗಳು/System Requirements

- ಕನಿಷ್ಠ ವಿಶೇಷತೆಯುಳ್ಳ ಡೆಸ್ಕ್ ಟಾಪ್/ಲ್ಯಾಪ್‌ಟಾಪ್ (2 ಜಿ.ಬಿ. RAM ಓ.ಎಸ್. ವಿಂಡೋಸ್ XP, 7 ಮತ್ತು ಅದಕ್ಕಿಂತ ಹೆಚ್ಚಿನ ಕೋರ್ 2 ಡಿಯೋ ಪ್ರಾಸೆಸ್ಸರ್)
- ಯುನಿಕೋಡ್ ಸಮರ್ಥವಿರುವ ಡೆಸ್ಕ್‌ಟಾಪ್/ಲ್ಯಾಪ್‌ಟಾಪ್ ಇದರಲ್ಲಿ ಗೂಗಲ್ ಕ್ರೋಮ್, ಮೋಜಿಲ್ಲಾ, ಫೈರ್ ಫಾಕ್ಸ್ ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಇತ್ಯಾದಿ ಬ್ರೌಸರ್ ನಿಂದ ಕೂಡಿರಬೇಕು. ನವೀನ ಮಾದರಿಯ ಬ್ರೌಸರ್ ಉಪಯೋಗಿಸುವಿಕೆಯನ್ನು ಶಿಫಾರಸ್ಸು ಮಾಡುತ್ತದೆ.
- ನಿಮ್ಮ ಸಿಸ್ಟಂನಲ್ಲಿ ಯುನಿಕೋಡನ್ನು ಹೇಗೆ ಸಮರ್ಥವಾಗಿಸಬೇಕು ತಿಳಿದಿರಬೇಕು, ದಯವಿಟ್ಟು ಈ ವೀಡಿಯೋವನ್ನು ನೋಡಲು ಈ ಲಿಂಕನ್ನು ಕ್ಲಿಕ್ಕಿಸುವುದರ ಮೂಲಕ ಆರಂಭಿಸಿ https://www.youtube.com/watch?v=1PEe388eo4Y
- ನಮ್ಮ ಜಾಲ ಆಧಾರಿತ ಪ್ರಶ್ನಾಂಶ ದಾಖಲಿಸುವ ಅಪ್ಲಿಕೇಷನ್ ಕೇವಲ ಯುನಿಕೋಡನ್ನು ಬೆಂಬಲಿಸುತ್ತದೆ. ನೀವು "ತುಂಗಾ" ಫಾಂಟನ್ನು ಉಪಯೋಗಿಸಿ ಎಂದು ನಾವು ಶಿಫಾರಸ್ಸು ಮಾಡುತ್ತೇವೆ. ನೀವು ನಿರ್ವಹಿಸುವ ಸಿಸ್ಟಂನಲ್ಲಿ ಈ ಫಾಂಟ್ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

## ಲಾಗಿನ್ ಸ್ಕ್ರೀನ್

**ಹಂತ 1:** ಯಾವುದೇ ಒಂದು ಬ್ರೌಸರನ್ನು ತೆರೆಯಿರಿ.

**ಹಂತ 2:** ಬ್ರೌಸರ್ ನ ವಿಳಾಸವಾದ www.ciil-ntsindia.net/kannada ಈ ಲಿಂಕನ್ನು ಕ್ಲಿಕ್ಕಿಸಿರಿ.




**ಹಂತ 3:** ಬಳಕೆದಾರನ ಹೆಸರಿನಲ್ಲಿ ನಿಮ್ಮ ಇಮೇಲ್-ಐಡಿಯನ್ನು ದಾಖಲಿಸಿ.

**ಹಂತ 4:** ಪಾಸ್‌ವರ್ಡನ್ನು ದಾಖಲಿಸಿ.

**ಹಂತ 5:** ಲಾಗ್ ಇನ್ ಅನ್ನು ಕ್ಲಿಕ್ಕಿಸಿ.

### ಅಂಶ ಕಡತ ಚೀಟಿಯ ಪರಾಮಿತಿಗಳು

1. **ಜಿ.ಎಫ್.ಆರ್. ನ ಸಂಕೇತ ಮತ್ತು ವಿಷಯಾಂಶ**




**ಹಂತ 6:** ವಿಷಯಾಂಶವನ್ನು ಆಯ್ಕೆ ಮಾಡಿರಿ ಅಥವಾ ನಿಮ್ಮ ಪ್ರಶ್ನಾಂಶವು ಸಂಬಂಧಿಸಿರುವ ಅಂಶಗಳಾದ ಭಾಷೆ / ಸಾಹಿತ್ಯ / ವ್ಯಕ್ತಿತ್ವದ ವಿಷಯಾಂಶದ ಸಂಖ್ಯೆಯನ್ನು ನಮೂದಿಸಿರಿ.

**ಹಂತ 7:** ನಂತರದ ಬಟನ್ ಅನ್ನು ಕ್ಲಿಕ್ಕಿಸಿ.

### 2. ಆಯಾಮಗಳ ಸಮಸ್ಯೆ




**ಹಂತ 8:** ಆಯಾಮಗಳ ಸಮಸ್ಯೆಯನ್ನು ಆರಿಸಿರಿ ಮತ್ತು ನಂತರ ಬಟನನ್ನು ಕ್ಲಿಕ್ಕಿಸಿ. ಪ್ರತಿಯೊಂದು ಆಯ್ಕೆ ಮಾಡಿದ ವಿಷಯಾಂಶಗಳಿಗೆ (ಭಾಷೆ / ಸಾಹಿತ್ಯ / ವ್ಯಕ್ತಿತ್ವ), ಸಂಬಂಧಿತ ಆಯಾಮದ ಸಮಸ್ಯೆಯು ಸ್ವಯಂಚಾಲಿತವಾಗಿ ಕೆಳಗೆ ಕೊಟ್ಟಿರುವ ಮೆನುವಿನಲ್ಲಿ ಪ್ರದರ್ಶಿಸಲಾಗಿದೆ.


### 3. ನಿರ್ವಹಣೆಯ ವಿವರಗಳು ಮತ್ತು ಸೂಚನೆ




**ಹಂತ 9:** ನಿರ್ವಹಣಾ ವಿವರಗಳನ್ನು ದಾಖಲಿಸಿ.

**ಹಂತ 10:** ಪರೀಕ್ಷಾರ್ಥಿಗೆ ಸೂಚನೆಯನ್ನು ದಾಖಲಿಸಿ. ಆನಂತರ ಮುಂದಿನ ಬಟನ್ನನ್ನು ಕ್ಲಿಕ್ಕಿಸಿ.


4. ಪ್ರಶ್ನಾಂಶ




**ಹಂತ 11:** ಪ್ರಶ್ನಾಂಶಕ್ಕೆ ಸಂಬಂಧಿಸಿದ ಕೆಳಗೆ ನೀಡಲಾದ ವಿವರಗಳನ್ನು ದಾಖಲಿಸಿ.

1. ಪ್ರಶ್ನಾಂಶದ ಪ್ರರೂಪವನ್ನು ಆಯ್ಕೆ ಮಾಡಿ.
2. ನೀಡಲಾದ ಪಠ್ಯ ಸ್ಥಳದಲ್ಲಿ ಪ್ರಶ್ನೆಯನ್ನು ದಾಖಲಿಸಿ.
3. ಯಾವುದಾದರು ಆಯ್ಕೆಗಳಿದ್ದರೆ ದಾಖಲಿಸಿ.
4. ಉತ್ತರ ಸೂಚಿಯನ್ನು ದಾಖಲಿಸಿ.
5. ಅಂಕಗಳನ್ನು ದಾಖಲಿಸಿ (ಸಂಖ್ಯೆಗಳಲ್ಲಿ ಮಾತ್ರ)
6. ಸಮಯವನ್ನು ನಿಮಿಷಗಳಲ್ಲಿ ದಾಖಲಿಸಿ (ಸಂಖ್ಯೆಗಳಲ್ಲಿ ಮಾತ್ರ)
7. ಗಳಿಕಾಂಕನ ವಿಧಾನವನ್ನು ಆರಿಸಿ.
8. ನೀವು ಆಯ್ಕೆ ಮಾಡಿದ ಉಪಾಂಗವು ಈಗಾಗಲೇ ಪ್ರದರ್ಶಿತವಾಗಿದೆ.
9. ಪ್ರಶ್ನೆ ಬರಹಗಾರನ ಉದ್ದೇಶವನ್ನು ದಾಖಲಿಸಿ.
10. ನಂತರದ ಬಟನ್ನನ್ನು ಕ್ಲಿಕ್ಕಿಸಿ.

5. ಅಂಶ ಪ್ರರೂಪ




ಹಂತ 12: ಮುಂದಿನ ತೆರೆಯ ಮೇಲಿರುವ ವಿವರಣೆಗಳನ್ನು ದಾಖಲಿಸಿ.

1. ಪರಿಚಯಿಸುವ ರೀತಿಯನ್ನು ಆಯ್ಕೆ ಮಾಡಿ (ಈ ಸಂಗತಿಯಲ್ಲಿ ಲಿಖಿತ ಎಂಬುದನ್ನು ಆರಿಸಿ)
2. ಶೈಕ್ಷಣಿಕ ಹಂತವನ್ನು ಆಯ್ಕೆ ಮಾಡಿ.
3. ವಿವೇಚನೆಯನ್ನು ದಾಖಲಿಸಿ.
4. ಸಿಸ್ಟಂನಲ್ಲಿ ತನಗೆ ತಾನೆ ಆರಿಸುವಿಕೆ ಸೂಚ್ಯಂಕ ಪ್ರದರ್ಶಿತವಾಗುತ್ತದೆ.
5. ಅನುಕೂಲಕರ ಮೌಲ್ಯವು ತನಗೆ ತಾನೆ ಸಿಸ್ಟಂನಲ್ಲಿ ಪ್ರದರ್ಶಿತವಾಗುತ್ತದೆ.
6. ವಿವೇಚನಾತ್ಮಕ ಮೌಲ್ಯವು ತನಗೆ ತಾನೆ ಸಿಸ್ಟಂನಲ್ಲಿ ಪ್ರದರ್ಶಿತವಾಗುತ್ತದೆ.
7. ಮಧ್ಯಮ ಸಾಮರ್ಥ್ಯ ಸೂಚ್ಯಂಕವೂ ಸಹ ತನಗೆ ತಾನೆ ಸಿಸ್ಟಂನಲ್ಲಿ ಪ್ರದರ್ಶಿತವಾಗುತ್ತದೆ.
8. ಪೂರ್ವ-ಸಿಂಧುತ್ವೀಕರಣದ ಹಂತವನ್ನು ತನಗೆ ತಾನೆ ಸಿಸ್ಟಂನಲ್ಲಿ ಪ್ರದರ್ಶಿತವಾಗುತ್ತದೆ.
9. Submit ಬಟನನ್ನು ಕ್ಲಿಕ್ಕಿಸಿ.

ಯಶಸ್ವಿಯಾಗಿ ಪ್ರಶ್ನಾಂಶವನ್ನು ಸಂಕಲಿಸಲಾಯಿತು.

**ಹಂತ 13:** ಬಳಕೆದಾರನು ತನ್ನ ದಾಖಲಿತ ವಿವರವನ್ನು ಸ್ವಾಗತ (ಬಳಕೆದಾರನ ಹೆಸರು) ಬಟನ್ನನ್ನು ಕ್ಲಿಕ್ಕಿಸುವುದರ ಮೂಲಕ ನೋಡಬಹುದು.




**ಹಂತ 14:** ದಾಖಲಿತ ವಿವರವನ್ನು ಕ್ಲಿಕ್ಕಿಸಿ.




ಮಾಡಿದ ಕಾರ್ಯದ ಪಕ್ಷಿನೋಟ/ಅವಲೋಕನವು ಪ್ರದರ್ಶಿತವಾಗುತ್ತದೆ.

**ಹಂತ 15:** ಪ್ರಶ್ನಾಂಶಗಳ ದಾಖಲಿಸುವಿಕೆಯು ಸಂಪೂರ್ಣವಾದ ನಂತರ ಸೈನ್ ಔಟ್ ಬಟನ್ನನ್ನು ಕ್ಲಿಕ್ಕಿಸಿರಿ.

